INTERNATIONAL RESEARCH JOURNAL OF MANAGEMENT SOCIOLOGY & HUMANITIES



ISSN 2277 – 9809 (online)
ISSN 2348 - 9359 (Print)

An Internationally Indexed Peer Reviewed & Refereed Journal

www.IRJMSH.com
www.isarasolutions.com

Published by iSaRa Solutions

"Hariharana Pushparagale" - Adara Vaishistya

Dr. Pandit Rathod
Associate Professor
Karnataka University Dharwad (KUD)
State: Karnataka

“ಹರಿಹರನ ಪುಷ್ಪರಗಳೆ” – ಅದರ ವೈಶಿಷ್ಟ್ಯ

ಡಾ.ಪಿ.ಕೆ. ರಾಠೋಡ
ಸಹ ಪ್ರಾಧ್ಯಾಪಕರು, ಕ. ವಿ. ವಿಧಾರವಾಡ

ಕನ್ನಡ ಸಾಹಿತ್ಯದಲ್ಲಿ ಹರಿಹರ ಒಬ್ಬ ಕ್ರಾಂತಿಕಾರ ಕವಿ-ಅನೇಕ ಅರ್ಥಗಳಲ್ಲಿ, ಅವನು ‘ರಗಳೆಯ ಕವಿ’ ಎಂಬ ಕಾರಣದಿಂದ ಮಾತ್ರವೇ ದೊಡ್ಡವನಾಗಿಲ್ಲ. ಆ ಮಾತಿನಲ್ಲಿ ಇರಬಹುದಾದ ಅಪಹಾಸ್ಯದ ಛಾಯೆಯನ್ನು ನಿವಾಲಿಸಿ ನೋಡಿದಾಗ, ಹರಿಹರನ ಕ್ರಾಂತಿಯ ಒಂದು ಮುಖವನ್ನದು ಸೂಚಿಸುವುದೇನೋ ನಿಜ. ಆದರೆ ಹರಿಹರನ ಹಿರಿಮೆ ಅಷ್ಟೇ ಅಲ್ಲ. ಛಂದಸ್ಸಿನಲ್ಲಿ ಮಾತ್ರವಲ್ಲದೆ ವಸ್ತು, ಭಾಷೆ, ಶೈಲಿಗಳಲ್ಲಿ ಅವನು ತೆರೆದ ಹಾದಿ ಕನ್ನಡದಲ್ಲಿ ಹೊಸದು. ಅವನು ಬರೆದ ‘ಶಿವಶರಣರ ರಗಳೆ’ಗಳು ಈ ಹೊಸಹಾದಿಯ ಹಲವು ಮೈಲಿ ಗಲ್ಲುಗಳು.

ಒಂದು ದೃಷ್ಟಿಯಿಂದ ಹರಿಹರನನ್ನು ನಡುಗನ್ನಡದ ಅರ್ಥಾತ್ ಹೊಸಗನ್ನಡದ ಆದಿ ಪುರುಷನೆಂದು ಕರೆದರೂ ತಪ್ಪಲ್ಲ. ವಾಸ್ತವವಾಗಿ ಈ ಕೀರ್ತಿ ಸಲ್ಲಬೇಕಾದುದು ಬಸವೇಶ್ವರ ಮುಂತಾದ ವಚನಕಾರರಿಗೆ. ಆದರೆ ವಚನಕಾರರು ಗುಡಿಯ ಮೂಲವಿಗ್ರಹವಿದ್ದಂತೆ, ಹರಿಹರನಾದರೋ ಉತ್ಸವಮೂರ್ತಿ, ಅಲ್ಲದೆ, ವಚನಕಾರರ ಕ್ಷೇತ್ರ ಸಾಹಿತ್ಯವಲ್ಲ; ಹರಿಹರನಾದರೆ ಪ್ರಧಾನವಾಗಿ ಕವಿ. ಈ ದೃಷ್ಟಿಯಿಂದ ನೋಡಿದಾಗ ಹರಿಹರನ ಪ್ರಾಮುಖ್ಯವನ್ನು ಗುರುತಿಸುವುದು ಸುಲಭವೆಂದು ಕಾಣುತ್ತದೆ. ಅವನು ಕವಿಯೆಂತೋ ಅಂತೆಯೇ ಭಕ್ತನೂ ಹೌದು, ಭಗವದ್ ಭಕ್ತರ ಜೀವನಕಥೆ ಗಳನ್ನು ವಿರಚಿಸಲು ಅಷ್ಟೇ ಭಕ್ತಿಯುಳ್ಳ ಕವಿಯೊಬ್ಬ ದೊರೆತದ್ದು ಸಾಹಿತ್ಯಲೋಕದಲ್ಲಿ ಅಪರೂಪದ ಸಂಗತಿ. ಇದರಿಂದ ಕವಿಗೂ ಕಾವ್ಯಕ್ಕೂ ಅಭೇದವೇರ್ಪಟ್ಟಿದೆ ಎನ್ನಬಹುದು; ಶಿವಶರಣರನ್ನು ಹರಿಹರ ಎಷ್ಟರಮಟ್ಟಿಗೆ ಚಿತ್ರಿಸಿದ್ದಾನೆ? ಅಷ್ಟರ ಮಟ್ಟಿಗೆ ತನ್ನನ್ನೇ ಚಿತ್ರಿಸಿಕೊಂಡಿದ್ದಾನೆ ಎಂದರೆ ತಪ್ಪಾಗಲಾರದು.

ಇದು ಶಿವಶರಣರ ರಗಳೆಗಳ ಮಹತ್ವವನ್ನು ಕುರಿತು ಮಾತಾಯಿತು, ಇವುಗಳಲ್ಲದೆ ಹರಿಹರ ಉತ್ತಮವಾದ ಒಂದು ಚಂಪೂಕಾವ್ಯ ಬರೆದಿದ್ದಾನೆ; ಆತ್ಮವೃತ್ತ ಪ್ರಧಾನವಾದ ಎರಡು ವಿಶಿಷ್ಟ ಶತಕಗಳನ್ನು ಬರೆದಿದ್ದಾನೆ; ಅವನು ರಚಿಸಿರುವ ವಿಭೂತಿ ರುದ್ರಾಕ್ಷಿ ಮುಂತಾದ ಅಷ್ಟಾವರಣ ಸಂಬಂಧವಾದ ರಗಳೆಗಳೂ ಗಮನಾರ್ಹವಾಗಿವೆ. ಈ ಸಾಲಿನಲ್ಲಿ ಬರುತ್ತದೆ ಅವನ ‘ಪುಷ್ಪರಗಳೆ’, ಭಕ್ತಿಯನ್ನು ಮಾತ್ರವಲ್ಲ, ಅದರ ಸಾಧನ ಪರಿಕರಗಳನ್ನು ಕೂಡ ಹರಿಹರ ಚಿತ್ರಿಸಿರುವುದು ಲಕ್ಷಿಸಬೇಕಾದ ವಿಷಯ. ವಿಭೂತಿಯ ರಗಳೆ, ರುದ್ರಾಕ್ಷಿಯ ರಗಳೆ ಮುಂತಾದುವುಗಳ ವರ್ಗಕ್ಕೆ ಪುಷ್ಪರಗಳೆ ಸೇರುವಂತೆ ತೋರಿದರೂ, ತಿರುಳಿನಲ್ಲಿ ಅವುಗಳಿಗಿಂತ ಇದು ತೀರ ಭಿನ್ನವಾದುದು. ಏಕೆಂದರೆ, ಆ ರಗಳೆಗಳ ಲ್ಲಿರುವ ಶುದ್ಧ ಧಾರ್ಮಿಕ ಅಥವಾ ಆಧ್ಯಾತ್ಮಿಕ ಆವರಣ ‘ಪುಷ್ಪರಗಳೆ’ ಯಲ್ಲಿಲ್ಲ; ಇದು ಬಹು ಮಟ್ಟಿಗೆ ಲೌಕಿಕವಾದ (ಖಜಛಿಣಟಜಿಡಿ) ಕಾವ್ಯಕೃತಿ. ಶುದ್ಧವಾದ ಭಾವಗೀತೆ ಎಂಬ ಒಂದು ಮಾತಿನಲ್ಲಿ ‘ಪುಷ್ಪರಗಳೆ’ ಯನ್ನು ಸಮರ್ಪಕವಾಗಿ ವರ್ಣಿಸಬಹುದು.

ಭಾವಗೀತೆ (ಐಥಿಡುಐ) ಎಂದು ನಾವು ಕರೆಯುವ ಕಾವ್ಯ ಪ್ರಕಾರದ ಎಲ್ಲ ಲಕ್ಷಣಗಳೂ ಪುಷ್ಪರಗಳೆಯಲ್ಲಿ ಗೋಚರಿಸುತ್ತಿವೆ. ಅದನ್ನು ಸೂಚಿಸುವುದೇ ಪ್ರಕೃತ ಲೇಖನದ ಆಶಯ. ಭಾವ ಗೀತೆಯಾಗಿರುವುದಷ್ಟೇ ಅಲ್ಲದೆ, ಉನ್ನತವಾದ ದರ್ಶನವೊಂದನ್ನು ಈ ರಗಳೆ ಗರ್ಭೀಕರಿಸಿಕೊಂಡಿದೆ. ಈ ಕಾರಣಗಳಿಂದ ಪುಷ್ಪರಗಳೆ, ಕನ್ನಡ ವಾಙ್ಮಯದಲ್ಲಿ ಒಂದು ಅಪೂರ್ವಕೃತಿ ಎನ್ನಲಡ್ಡಿಯಿಲ್ಲ, ಇದು ಹೊಸಬಗೆಯ ಒಂದು ಕೃತಿ ಎಂಬ ಪ್ರಜ್ಞೆ ಕವಿಗೇ ಇದ್ದಂತೆ ಕಾಣುತ್ತದೆ; ಆದ್ದರಿಂದಲೇ ಅವನು ಇದನ್ನು 'ಪೊಸ ಪೂಮಾಲೆ' ಎಂದು ಕರೆದಿದ್ದಾನೆ, ರಗಳೆಯ ಪ್ರಾರಂಭದಲ್ಲಿ ಬರುವ ಈ ಕಂದ ಪದ್ಯದಲ್ಲಿ:

ಱಲಿಯೊಳೋಲೈಪೆಂ ಮಧು ರಾಲಾಪದೆ
ಪುಷ್ಪರಗಳೆಯೆಂಬೀ ಪೊಸ ಪೂ।
ಮಾಲೆಯನವಧರಿಸಗಜಾ
ಲೋಲ ಮಹಾಶೀಲ ಹಂಪೆಯ ವಿರೂಪಾಕ್ಷ।

ಇಲ್ಲಿ ಒಂದು ಸ್ಪಷ್ಟೀಕರಣ ನೀಡುವುದು ಅನುಚಿತವಾಗಲಾರದು. ಏಕೆಂದರೆ, ಭಾವಗೀತೆ ಎಂಬ ಪ್ರಕಾರ ಇತ್ತೀಚೆಗೆ ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ ಬಂದುದಲ್ಲವೆ? ನಮ್ಮ ಹಿಂದಿನ ಸಾಹಿತ್ಯದಲ್ಲಿ ಇದು ಎಲ್ಲಿತ್ತು? ಎಂಬ ಸಂದೇಹ ಹುಟ್ಟಬಹುದು.

ಭಾವಗೀತೆ, ಕಾದಂಬರಿ, ಸಣ್ಣಕತೆ ಮೊದಲಾದ ಪ್ರಕಾರಗಳು ಇಂಗ್ಲಿಷಿನಿಂದ ಬಂದುವು ಎಂದು ನಾವು ಸಾಮಾನ್ಯವಾಗಿ ಹೇಳುವಾಗ, ಆ ಹೇಳಿಕೆಗೆ ಕೆಲವು ಪರಿಮಿತಿಗಳಿರಬೇಕೆಂದು ಕಾಣುತ್ತದೆ. ಏಕೆಂದರೆ, ಈ ಯಾವುದೊಂದು ಪ್ರಕಾರವೂ ನಮಗೆ ಸಂಪೂರ್ಣ ಹೊಸದಲ್ಲ. ಇವು ಭಾರತೀಯ ಸಾಹಿತ್ಯಗಳಲ್ಲಿ ಹಿಂದಿನಿಂದಲೂ ಅಸ್ಪಟವಾಗಿದ್ದುವು; ಆದರೆ ಇದಕ್ಕೆ ನಿಶ್ಚಿತವಾದ ರೂಪುರೇಖೆಗಳುಂಟಾದುದು ಇಂಗ್ಲಿಷಿನ ಪ್ರಭಾವದಿಂದ. ಎಂದರೆ, ಉಸಿರು ನಮ್ಮಲ್ಲೇ ಇತ್ತು, ಹೆಸರು ಮಾತ್ರ ಹೊರಗಿನಿಂದ ಬಂತು ಎಂದು ಹೇಳಿದರೆ ಸರಿಯಾದೀತು ಕಾದಂಬರಿ ನಮ್ಮಲ್ಲಿ ಹಿಂದೆ ಇರಲಿಲ್ಲವೆ? ಇತ್ತೆನ್ನುವುದನ್ನು ಆ ಹೆಸರೇ ಸೂಚಿಸುತ್ತದೆ, ಬಾಣಭಟ್ಟನ 'ಕಾದಂಬರಿ'ಯನ್ನು ನೆನಪು ಮಾಡುವುದರಿಂದ, ಕಥೆಗಳಿಗಂತೂ ಭಾರತೀಯ ಸಾಹಿತ್ಯ ತವರುಮನೆ.ಭಾವಗೀತೆಯ ವರ್ಗಕ್ಕೆ ಸೇರುವ ಭಾಗಗಳು ನಮ್ಮ ಮಹಾಕಾವ್ಯ, ಖಂಡಕಾವ್ಯಗಳಲ್ಲಿ ಯಥೇಷ್ಟವಾಗಿ ಸಿಗುತ್ತವೆ. ಕಾವ್ಯಗಳಲ್ಲಿ ಅಂತರ್ಗತವಾದ ಭಾವಗೀತಾತ್ಮಕ ಭಾಗಗಳು ಹಾಗಿರಲಿ, ತನಿಯಾದ ಭಾವಗೀತೆಗಳೇ ಪ್ರತ್ಯೇಕವಾಗಿ ರಚಿತವಾಗಿರುವುದೂ ಉಂಟು-ವಿರಳ ಎನ್ನಬಹುದಾದರೂ ಸದ್ಯಕ್ಕೆ ಒಂದೊಂದೇ ನಿದರ್ಶನ ಕೊಡುವುದಾದರೆ: ಸಂಸ್ಕೃತದಲ್ಲಿ ಕಾಳಿದಾಸನ 'ಋತುಸಂಹಾರ' ಸೊಗಸಾದ ಭಾವಗೀತೆಗಳ ಗೊಂಚಲು ; ಕನ್ನಡದಲ್ಲಿ ಹರಿಹರನ 'ಪುಷ್ಪರಗಳೆ' ಒಂದು ಸುಂದರ ಭಾವಗೀತೆ,

ಇದಕ್ಕೆ ತಾತ್ಪರ್ಯವಿಷ್ಣು: ಈ ಸಾಹಿತ್ಯ ಪ್ರಕಾರಗಳು ಮಾನವ ಹೃದಯದ ವಿವಿಧ ಆವಿಷ್ಕಾರಗಳು; ಅವು ಯಾವುದೇ ಸಾಹಿತ್ಯದಲ್ಲಿ ಸಹಜ, ಸ್ವಾಭಾವಿಕ. ಏಕೆಂದರೆ, ಕಲೆಯ ಸತ್ಯ ತನ್ನದೇ ಆದ ರೂಪವನ್ನು ನಿರ್ಮಿಸಿಕೊಳ್ಳುತ್ತದೆ. ಅದರ ಮೂಲ ಅಂತಃಸ್ಫೂರ್ತಿಯೇ ಹೊರತು ಅನುಕರಣವಲ್ಲ. ಆತ್ಮ ನಮ್ಮದಾಗಿ ಮೈ ಹೊರಗಿನಿಂದ ಬರುವುದು ಶಕ್ಯವಲ್ಲ. ಆದ್ದರಿಂದ, ಭಾವಗೀತೆ ಇತ್ಯಾದಿ ಪ್ರಕಾರಗಳು ನಮ್ಮಲ್ಲಿ ಮೊದಲು ಇರಲೇ ಇಲ್ಲ, ಇವು ಪಡುವಣ ಕಡಲು ಕಳುಹಿಸಿದ ತರಂಗಗಳು ಎಂದು ಪ್ರತಿಪಾದಿಸುವುದು ಅಸಮಂಜಸವಾಗುತ್ತದೆ.

ಇನ್ನು, ಭಾವಗೀತೆ ಎಂದರೇನು? ಕವಿಯ ವೈಯಕ್ತಿಕ ಭಾವದ ನೇರ ಅಭಿವ್ಯಕ್ತಿ ; ಕಥೆಯ ಹಂಗಿಗೆ ಒಳಗಾಗದ ಸ್ವತಂತ್ರ ವ್ಯಕ್ತಿನಿಷ್ಠ ರಚನೆ. ಒಂದು ಚಣದ ಭಾವ, ಅನುಭವ, ಸಂವೇದನೆ ಅದರಲ್ಲಿ ಮೂರ್ತಗೊಂಡಿರುತ್ತದೆ. ಆದ್ದರಿಂದಲೇ ಭಾವಗೀತೆ "ಒಂದು ಕ್ಷಣದ ಸ್ಮಾರಕ" (ಂ ಟಠಟಜಟಿಣ ಟಠಟಿಣಟಜಟಿಣ). ಭಾವತೀವ್ರತೆ, ಸಂಕ್ಷಿಪ್ತತೆ ಮತ್ತು ಗೇಯತೆ ಇವು ಅದರ ಮೂರು ಪ್ರಮುಖ ಗುಣಗಳೆಂದು ಒತ್ತಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ವಿವೇಚಿಸಿದಾಗ, ಹರೀಶ್ವರನ 'ಪುಷ್ಪರಗಳೆ' ಭಾವಗೀತೆಯ ಒಂದು ಉಜ್ವಲ ನಿದರ್ಶನವಾಗಿ ತೋರದಿರದು.

ಭಕ್ತ ಕವಿ ಹರಿಹರನ ದಿನಚರಿಯ ಒಂದು ಪುಟ 'ಪುಷ್ಪರಗಳೆ'ಯಲ್ಲಿ ಪ್ರಕಟವಾಗಿದೆ. ಒಂದು ಪ್ರಾತಃಕಾಲದಲ್ಲಿ ಶಿವಪೂಜೆಗೆ ಹೂವು ತರಲು ತೋಟಕ್ಕೆ ನಡೆದಾಗ, ಅಲ್ಲಿ ತನಗುಂಟಾದ ಭಾವಗಳನ್ನು ಕವಿ ಮೂಡಿಸಿದ್ದಾನೆ. ಹರಿಹರನ

ಭಕ್ತಿಯ ಉತ್ಸಾಹ, ಪುಷ್ಪಗಳನ್ನು ಕಂಡು ಅವನಿಗಾದ ಅಮಿತಾನಂದ, ಆ ಹೂಗಳ ಬಗ್ಗೆ ಅವನ ಆತ್ಮೀಯ ಮನೋಭಾವ- ಇವು ಮೂರೂ ಅವಿರೋಧವಾಗಿ ಸೇರಿ ಹರಿಹರನಲ್ಲಿ ಒಂದು ಅನುಭವವನ್ನು ಪ್ರಚೋದಿಸಿರುವ ಪರಿಯನ್ನಿಲ್ಲಿ ಕಾಣುತ್ತೇವೆ. ಈ ಅನುಭವ 'ಪುಷ್ಪರಗಳೆ'ಯಲ್ಲಿ ನೇರವಾಗಿ, ಒಂದಿನಿತೂ ವಿಚಲಿತವಾಗಿದೆ ವ್ಯಕ್ತವಾಗಿದೆ.

ಕುಸುಮಗಳ ವರ್ಣನೆಯಲ್ಲಂತೂ ಹರಿಹರನ ಸೌಂದರ್ಯದೃಷ್ಟಿ ಅನುಪಮವಾಗಿ ಎದ್ದು ಕಾಣುತ್ತದೆ. ಈ ರಗಳೆಯ ಒಂದು ತೆರನಾದ ಪುಷ್ಪ ವಿಮರ್ಶೆ ಎನ್ನಬಹುದು. ತೋಟದಲ್ಲಿ ಬಗೆಬಗೆಯ ಹೂಗಳಿರುತ್ತವೆ; ಒಂದರಂತೆ ಮತ್ತೊಂದಿರುವುದಿಲ್ಲ; ಒಂದರ ಸೌರಭ ಮತ್ತೊಂದರದಲ್ಲ. ಹರಿಹರನು ಒಂದೊಂದು ಹೂವಿನ ವೈಶಿಷ್ಟ್ಯವನ್ನೂ ಸೂಚಿಸಿ, ಅದರ ಪರಿಮಳದ ಪರಿಯನ್ನೂ ಚಿತ್ರಿಸಿದ್ದಾನೆ. ವಸ್ತುಸ್ವರೂಪದ ಬಗೆಗೆ ಅವನಿಗಿರುವ, ಸೂಕ್ಷ್ಮ ಪರಿಜ್ಞಾನ ಇಲ್ಲಿ ಕಂಡುಬರುತ್ತದೆ.

ಹರಿಹರನ ಒಂದೊಂದು ಹೂಗಿಡದ ಬಳಿಗೂ ತೆರಳಿ, ಶಿವನ ಮುಡಿಗೆ ಹೂಗಳನ್ನು ಕರುಣಿಸುವಂತೆ ಬೇಡುತ್ತ ನಡೆಯುವ ದೃಶ್ಯ ಪುಳಕ ಗೊಳಿಸುವಂಥದು. ದೇವರ ಪೂಜೆಯನ್ನು ತನ್ಮಯತೆಯಿಂದ ಎಷ್ಟೋ ಕವಿಗಳು ವರ್ಣಿಸಿದ್ದಾರೆ; ಆದರೆ ಅದಕ್ಕೆ ಪೂರ್ವಭಾವಿಯಾಗಿ ಪುಷ್ಪಸಂಚಯದ ಪೂಜೆಯನ್ನು ಹರಿಹರನ ಪಾಲಿಗೆ ಅದು ಪೂಜೆಯಲ್ಲದೆ ಬೇರೆಯಲ್ಲ ವರ್ಣಿಸಿದ ಕವಿಗಳು ಇನ್ನಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ.

ಹರಿಹರ ಬೆಳಗಿನ ಜಾವದಲ್ಲೇ ಎದ್ದು ವಿಭೂತಿ ಧರಿಸಿಕೊಳ್ಳುತ್ತಾನೆ; ಪರಿಮಳ ಸೋರಿ ಹೋಗದಂತೆ ಬಿಗಿಯಾಗಿ ಹೆಣೆದ ಕರಡಿಗೆಯೊಂದನ್ನು ಹಿಡಿದು ಭಕ್ತಿಗೀತೆಗಳನ್ನು ಹಾಡುತ್ತ ಹೊರಟು :

ಪರಿಮಳದ ಸುರ್ಗಿ ಸೌರಭದ ಸಂದಣಿಯೆನಿಪ
ಸುರುಚಿರಾಮೋದದ ರಸಾಂಭೋಧಿಯೆಂದೆನಿಪ

ಹೂದೋಟವನ್ನು ದೂರದಿಂದಲೇ ಕಂಡು ಹರ್ಷಿಸುತ್ತಾನೆ; ಉತ್ಸಾಹದ ಭರದಲ್ಲಿ 'ನಟನಂತೆ ಕುಣಿಕುಣಿದು' ಕೂಗುತ್ತಾನೆ; ಬಿಲ್ವವತ್ತ, ಕಕ್ಕೆ ಮುಂತಾದ ಪತ್ರಾಳಿಗಳನ್ನು ಕಂಡು 'ಶರಣು', 'ನಮೋ' ಎನ್ನುತ್ತ ಮುನ್ನಡೆಯುತ್ತಾನೆ. ಬರಬರುತ್ತ ಹೂದೋಟದ ಕಂಪು ತೀಡುತ್ತದೆ.

ಮನದಿಂದೆ ಕೈಕೊಳ್ವಮುನ್ನಮೀ ಗಂಧಮಂ
ನಿನಗೆ ಬಳಕೀವೆನುತ್ತಮ ಕುಸುಮವೃಂದಮಂ

ಎಂದು ಭಗವದರ್ಪಣ ಮಾಡುತ್ತ ತೋಟವನ್ನು ಹೊಕ್ಕು ರೋಮಾಂಚನಗೊಳ್ಳುತ್ತಾನೆ; ತೂಗಾಡುತ್ತ ತೊನೆದಾಡುತ್ತ 'ಆಹಾ ವಿರೂಪಾಕ್ಷ!' ಎಂದು ಮತ್ತೆ ಉರ್ಗಡಿಸುತ್ತ ಹಿಗ್ಗುತ್ತಾನೆ. ಭಕ್ತಿಯ ಉದ್ರೇಕದಲ್ಲಿ ಮಾತು ಸೋತು 'ಆಹಾ! ಓಹೋ!' ಮುಂತಾದ ಆಶ್ಚರ್ಯೋದ್ಗಾರಗಳನ್ನು ಸೂಸುವುದು ಅಥವಾ 'ನಟನಂತೆ' ಕುಣಿದು ಕುಪ್ಪಳಿಸುವುದು ಹರಿಹರನಲ್ಲಿ ಸಾಮಾನ್ಯ.

ಹೀಗೆ ಬರುತ್ತಿರಲು, "ಅಳಯಿಳಗದನಿಲ ನಲುಗದ ರವಿಕರಂ ಪುಗದ,* ಬೆಳಿಬೆಳಿದು ನಳನಳಿಸಿ ಮಘಮಘಿಸಿ ಕವಳಿಡದ" ಇರವಂತಿಗೆ ಕಾಣಿಸುತ್ತದೆ. ಹರಿಹರ 'ಪರಶಿವಂಗೊಲ್ಮೆಪ ಪೂವ ನೀಡೌ' ಎಂದು ಬೇಡಿ ಆ ಹೂವುಗಳನ್ನು ತೆಗೆದುಕೊಳ್ಳುತ್ತಾನೆ. ಮುಂದೆ ತೋರುವುದು ಸಂಪಗೆ. ಅದನ್ನು ಹರಿಹರ ಯಾಚಿಸುವುದೇ ಒಂದು ಚಂದ:

ಏನವ್ವ ಸಂಪಿಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸ ಕುಸುಮಮಂ ನೀಡು ನೀಡೆಂದು

ಕೇಳಿಕೊಳ್ಳುತ್ತಾನೆ. ಅನಂತರ "ಕುಂಕುಮದ ತಾರಗೆ" ಯಂತಿರುವ ಸೇವಂತಿಗೆಯಲ್ಲಿಗೆ ಬಂದು:

ಎಲೆಲೆ ಪರಿಮಳದ ತಣ್ಣಂಗರೆಯ ಬಾರವ್ವ
ಕುಲಪತಿಯಜಡೆಗಳೆ ಪೂಗಳಂ ತಾರವ್ವ

ಎಂದು ಕೈಯೊಡ್ಡಿ ಹೂ ಕೊಳ್ಳುತ್ತಾನೆ.

ಇನ್ನು ಮಲ್ಲಿಗೆಯ ಸರದಿ. ಅದನ್ನು ಕವಿ 'ಕಂಪಿನ ನಿಧಿ' ಎಂಬ ಒಂದೇ ಮಾತಿನಲ್ಲಿ ಸಮುಚಿತವಾಗಿ ಬಣ್ಣಿಸಿದ್ದಾನೆ. ಅದರ ಹೂಗಳನ್ನು ಮನವಾರೆ ಕೊಂಡುಕೊಂಡಾಡುತ್ತ ಜಾತಿ(ಜಿ)ಯ ಬಳಗೈದುತ್ತಾನೆ :

ಜಾತಿ ನೀನೆ ಸಕಲ ಪುಷ್ಪಜಾತಿಗೆ ಜಾತಿ

ಭೂತೇಶ್ವರನ ಜಡೆಯ ಮುಡಿಗೇರಿಜಾತಿದೊಡೆ

ಎಂದು ಹೊಗಳುತ್ತ ಅದರ ಕುಸುಮಗಳನ್ನು ಕೈ ಕೊಳ್ಳುತ್ತಾನೆ.

ಆ ಮೇಲೆ ಕಾಣಿಸುವುದು ಕೇದಗೆ. ಇದು ಸೌರಭಸಾಂದ್ರವಾದ ಹೂವು; ಬೇರೆ ಹೂಗಳಿಂದ ಭಿನ್ನವಾದುದು. ಆದ್ದರಿಂದ ಕವಿ ಅದನ್ನು:

ಅಹ ದೆಸೆದೆಸೆಗೆ ಬೀರುವ ಸುಗಂಧದ ಸೂರಿ

ಅಹ ಕೇತಕಿ ನಿನ್ನ ಪರಿಮಳದ ಪರಿ ಬೇರೆ

ಪರಿಮಳಂ ಸುಳಿಗೊಂಡು ಬೆಳೆದುಕವಳರೆಂಬುತ್ತೊ

ಉರವಣಿಸಿ ಬೆಳೆವ ಪರಿಮಳಕೆ ಗರಿಮೂಡಿತ್ತೊ

ಎಂದು ರಮ್ಯವಾಗಿ ವರ್ಣಿಸುತ್ತಾನೆ. ಕೇದಗೆ ಹೂವಿಗೆ ಹೊರಗೆ ಮುಳ್ಳಿರುತ್ತದೆ, ಒಳಗೆ ಪರಿಮಳವಿರುತ್ತದೆ. ಆದ್ದರಿಂದ ಅದನ್ನು ಈಶ್ವರನ ಗುಪ್ತಭಕ್ತನಿಗೆ ಹೋಲಿಸುತ್ತಾನೆ ಕವಿ.

ಮುಂದೆ 'ತಾರೆಗಳ ಮೊಳೆ'ಯಂತಿರುವ ಕಣಿಗಲೆ ಸಿಗುತ್ತದೆ; ಮೊಲ್ಲೆ, ಮರುಗ, ಮಡಿ ನಾಳ-ಇವೆಲ್ಲ ಕಾಣುತ್ತವೆ. ಅವನ್ನು ಕೊಂಡ ಹರಿಹರ ಪರಿಪರಿಯ ಕಂಪಿನಲ್ಲಿ ಮುಳುಗುತ್ತ ಮೂಡುತ್ತ ಬರುವಾಗ ದವನ ಕಂಗೊಳಿಸುತ್ತದೆ;

ದವನವೇ ಶಿವನ ಪರಿಮಳದ ಹಬ್ಬವೆ ಬಾರ

ಭುವನದೊಳ್ಳನಗೆ ಸರಿಯಿಲ್ಲ ಸೌರಭಸಾರ

ಎಂದು ಅದನ್ನು ಕವಿ ಕೈವಾರಿಸುತ್ತಾನೆ. ದವನದ ಅನನ್ಯ ಸೌರಭವನ್ನು ಉಂಡವರಿಗೆ ಈ ಮೆಚ್ಚುಗೆಯಲ್ಲಿರುವ ಸತ್ಯ ಮನಮುಟ್ಟದಿರದು. ಆನಂತರ ಹೊನ್ನೆಯನ್ನು ಕವಿ "ಏನೆನ್ನ ಹೊನ್ನೆ ಸುರಹೊನ್ನೆ ಪರಿಮಳದರಸಿ" ಎಂದು ಶ್ಲೇಷೆಯಿಂದ ಪ್ರಶಂಸಿಸುತ್ತಾನೆ. ಕಮಲ, ನೈದಿಲೆ, ಚೆಂಗಣಿಗಿಲೆಯ ಪುಷ್ಪಗಳನ್ನೂ ಅಂತೆಯೇ ಸಂಗ್ರಹಿಸುತ್ತಾನೆ.

ಇಷ್ಟಾದ ಮೇಲೆ ಒಂದು ನಿರ್ಮಳ ಸ್ಥಾನವನ್ನು ನೋಡಿ, ಎಳೆಯ ಮಾವಿನ ಮರದಡಿಯ ಒಂದು ಶಿಲಾತಲದಲ್ಲಿ ಕಮಲಪತ್ರಗಳನ್ನು ಹಾಸಿ ಹೂಗಳನ್ನು ಮೆಲ್ಲಮೆಲ್ಲನೆ ಸುರಿಯುತ್ತಾನೆ. ಅವುಗಳನ್ನು ಕೈಯಲ್ಲಿ ಮುಟ್ಟದೆ ಮನಸ್ಸಿನಲ್ಲಿ ಮುಟ್ಟುತ್ತ ಪೋಣಿಸುತ್ತಾನೆ; ಕೈ ತಪ್ಪಿ ಒಂದು ಹೂ ಕೆಳಗೆ ಬಿದ್ದರೆ 'ಸತ್ತು ಹುಟ್ಟು'ತ್ತಾನೆ; ನೋಡಿದರೆ ಹೂ ಬಾಡುವುದೆಂದು ಕಣ್ಮುಚ್ಚುತ್ತಾನೆ. ಹೀಗೆ ಭಕ್ತಿ ಪರವಶನಾಗಿ ಹೂಗಳನ್ನು ಕಟ್ಟಿ ಶಿವನ ಅರಮನೆಗೆ ಬೇಗ ಸಾಗಿ ಬರುತ್ತಾನೆ. ಅನಂತರ ಶಿವನ ಪುಷ್ಪಾಲಂಕಾರ, ಪೂಜಾ ವೈಭವ ಮೊದಲಾಗುತ್ತವೆ.

ಸೇವಂತಿಗೆ ಹೂವಿನ ಪನ್ನೀರಿನಿಂದ ಕವಿ ಶಿವನಿಗೆ ಮುಖ ಮಜ್ಜನ ಮಾಡಿಸುತ್ತಾನೆ; ಪರಾಗದ ವಿಭೂತಿಯಿಂದ ತಿಲಕವಿಕ್ಕುತ್ತಾನೆ; ದೇವನ ಸಿರಿಮುಡಿಯನ್ನು ಸಡಿಲಿಸಿ ನಯದಿಂದ ಬಿಡಿಸಿ ಕೆಂಜೆಡೆಗಳನ್ನು ಅಲಂಕರಿಸುತ್ತಾನೆ. ಹೊಸ ಪಡ್ಡಳೀಯ ಪರಿಮಳದಿಂದ ಕತ್ತುರಿಯಕ್ಕಿ, ಇರವಂತಿಯನ್ನು ಮುಡಿಗೆ ಸೂಡುತ್ತಾನೆ. ಮಲ್ಲಿಗೆಯ ಸುಗಂಧವೇ ಚಂದನ, ಮೊಲ್ಲೆಯ ಹೂಗಳೇ ನಾಗ ಕುಂಡಲ, ಜಾಜಿಯ ಸೌರಭವೇ ಮೃಗಮದ, ಮರುಗವೇ ಗಜಚರ್ಮ, ಸಂಪಿಗೆಗಳೇ ಪುಲಿ ದೊವಲು, ಸುರಹೊನ್ನೆಗಳೇ ಉರಗ ಕಂಕಣ ಹೀಗೆ ವಿವಿಧ ಪುಷ್ಪಗಳೇ ಶಿವನಿಗೆ ಉಡುಗೆ ತೊಡುಗೆಗಳಾಗುತ್ತವೆ. ದವನ ಸೀಗುರಿಯಾಗುತ್ತದೆ, ಕಂಪಿನ ಮಡಿವಾಳವೇ ಚಾಮರವಾಗತ್ತದೆ.

ಅನಂತರ ಆರತಿಯೆತ್ತಿ ಆರೋಗಣೆಯಿತ್ತು ಪ್ರಸಾದವನ್ನು ಕೊಂಡು ಕವಿ ಶಿವನನ್ನು ಹಾಡಿ ಹೊಗಳತೊಡಗುತ್ತಾನೆ. ಇಲ್ಲಿ ಹರಿಹರನ ಭಕ್ತಿಯ ಆಧಿಕ್ಯ ತೀವ್ರವಾಗಿ ಪ್ರಕಾಶನಗೊಂಡಿದೆ:

ದೇವ ಸುಕುಮಾರ ಶಶಿಶೇಖರ ವಿರೂಪಾಕ್ಷ

ದೇವ ಪರಿಮಳವೃಂದಸೇವಿತ ವಿರೂಪಾಕ್ಷ

ಇತ್ಯಾದಿಯಾಗಿ ಹಾಡುತ್ತ, ನಲಿದಾಡುತ್ತ, ಮುದ್ದಿಸುತ್ತ, ಪುಳಕಿಸುತ್ತ ಭಕ್ತಿಪರವಶನಾಗುತ್ತಾನೆ.

ಭಕ್ತಿ ಸುಖದಿಂದಿತರ ಸುಖವದೆಲ್ಲಿಯದೆನಿಸಿ

ಮುಕ್ತಿ ಸುಖದಿಂದಧಿಕಮಿದಕೆ ಪಡಿಯಿಲ್ಲೆನಿಸಿ
ಉರವಣಿಸಿ ಪರಮಭಕುತಿಯ ಸುಖದ ಸೊಕ್ಕೇರಿ
ಪರಮ ಪದದಾನಂದ ಸುಖದ ಸುಧೆ ತಲೆಗೇರಿ

ಅವನು ಮೈ ಮರೆಯುತ್ತಾನೆ; ಆ ತಲ್ಲೀನತೆಯಲ್ಲಿ "ವೀವೀ ರೂರೂಪಾಕ್ಷಕ್ಷ" ಎಂದು ನುಡಿ ತೊದಲು ಇದೆ; ಅವನ ಸರ್ವಾಂಗವೂ ಶಿವಮಯವಾಗುತ್ತದೆ.

ಎನಗೆ ಹೊನ್ನುಂನೀನೆ ಎನಗೆ ಬೆನ್ನುಂನೀನೆ
ಎನಗೆ ಕೆಲವುಂ ನೀನೆ ಎನಗೆ ಬಲವುಂ ನೀನೆ
ಎನಗೆ ಸರ್ವಂ ನೀನೆ ಎನಗೆ ಗರ್ವಂ ನೀನೆ
ಎನಗೆ ಮಾತೆಯು ಸೀನೆ ಎನಗೆ ಪಿತನುಂ ನೀನೆ
ರಕ್ಷಿಸು ವಿರೂಪಾಕ್ಷ ವೀಕ್ಷಿಸು ವಿರೂಪಾಕ್ಷ
ಕರುಣಿಸು ವಿರೂಪಾಕ್ಷ ಪಲಿಕಿಸು ವಿರೂಪಾಕ್ಷ*

ಎಂದು ಹಲಿಹರನು ದೇವನಿಗೆ ಸಂಪೂರ್ಣ ಶರಣಾಗತನಾಗಿ ವಿರಮಿಸುತ್ತಾನೆ.

"ಪುಷ್ಪರಗಳೆ" ಹೀಗೆ ಒಂದೇ ನಿಟ್ಟಿನಲ್ಲಿ ಸಾಗಿ ಮುಗಿದಿದೆಯೆಂಬುದು ಈ ಪರಿಚಯದಿಂದ ವೇದ್ಯವಾಗುತ್ತದೆ. ಅದರಲ್ಲಿ ಯಾವುದೂ ಅತಿ ಯಾಗಿಲ್ಲ; ಔಚಿತ್ಯದ ಸೀಮೆಯನ್ನು ದಾಟಿಲ್ಲ. ಎಷ್ಟು ಬೇಕೋ ಅಷ್ಟೇ ಮಾತು; "ಅರ್ಥ ಮುಕ್ತ, ಭಾವ ದೀಪ್ತ, ಧ್ವನಿಪ್ರಚುರ" ಎನ್ನಬಹುದಾದ ರೀತಿ, ಇದು ಭಾವಗೀತೆಯ ಗುಣವಿಶೇಷ.

ಪುಷ್ಪಸಂಚಯವಾದಮೇಲೆಬರುವಶಿವಪೂಜೆಯ ಭಾಗ ಪ್ರತ್ಯೇಕವಾಗಬಹುದಿತ್ತು. ಹಾಗಾಗದಂತೆ ಕವಿ ನೋಡಿಕೊಂಡಿದ್ದಾನೆ. ಶಿವನ ಎಲ್ಲ ಶೃಂಗಾರವೂ ಪುಷ್ಪಗಳಿಂದಲೇ ನಡೆಯುತ್ತದೆ; ಕಸ್ತೂರಿ, ಚಂದನ, ವಿಭೂತಿ ಎಲ್ಲವೂ ಹೂಗಳಿಂದಲೇ, ಶಿವ 'ಪರಿಮಳ' ವೃಂದಸೇವಿತನಾಗಿದ್ದಾನೆ. ಹೀಗಾಗಿ 'ಪುಷ್ಪರಗಳೆ' ಎಂಬ ಹೆಸರು ಸಾರ್ಥಕವಾಗಿದೆ ; ಉದ್ದಕ್ಕೂ ಒಂದೇ ಸೂತ್ರ ಉಳಿದು ಬಂದಿದೆ.

ಇನ್ನು ಹಲಿಹರ ಈ ರಗಳೆಯಲ್ಲಿ ಕಂಡು ವ್ಯಕ್ತಗೊಳಿಸಿರುವ ದರ್ಶನ ಯಾವುದು? ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳು ಸಿಕ್ಕುತ್ತದೆ.

ಪೂಜೆ ಎಷ್ಟು ಮುಖ್ಯವೋ ಪೂಜಾಸಾಮಗ್ರಿಯೂ ಅಷ್ಟೇ ಮುಖ್ಯ; ಗುರಿ ಪೂಜ್ಯವಾದಂತೆ ದಾರಿಯೂ ಪೂಜ್ಯ ಎಂಬ ಕಾಣ್ಕೆ ಹಲಿಹರನ ಈ ರಗಳೆಯಲ್ಲಿ ಮೈವೆತ್ತಿದೆ. ಹೂವುಗಳ ಬಗ್ಗೆ ಅವನು ಅದೆಷ್ಟು ಮೃದುವಾಗಿ ವರ್ತಿಸುತ್ತಾನೆ! ಅದೆಂತಹ ಆತ್ಮೀಯತೆ ! ಬಾರವ್ವ, ನೀಡವ್ವ ಮುಂತಾದ ಮಾತುಗಳಲ್ಲಿ ಹುದುಗಿರುವ ಪ್ರೀತಿ, ಅನುಕಂಪಗಳು ವಿಸ್ಮಯ ಹುಟ್ಟಿಸುತ್ತವೆ. ಹೂವು ನೆಲಕ್ಕೆ ಬಿದ್ದಿತೆಂದು ಅವನು ವಹಿಸುವ ಎಚ್ಚರ, ಅದರ ಬಗ್ಗೆ ಅವನಿಗಿರುವ ಗೌರವಭಾವನೆಗೆ ಪ್ರತೀಕ. ಎಷ್ಟು ಜನರಲ್ಲಿ ಇದು ಕಂಡು ಬರುತ್ತದೆ? ಹೂಗಳನ್ನು ಯಾಂತ್ರಿಕವಾಗಿ ತರಿದು ತರುವವರೇ ಬಹುಮಂದಿ; ಈ ತರಿಯುವ ಪ್ರವೃತ್ತಿಗೂ ಹಲಿಹರನ ತರಿಯುವ ಪ್ರವೃತ್ತಿಗೂ ಎಷ್ಟೊಂದು ಅಂತರ!

ಹೂವು ಒಂದು ನಿರ್ಜೀವ ವಸ್ತು ಎಂಬ ಭಾವನೆ ಕವಿಗಿದ್ದಿದ್ದರೆ ಈ ಪ್ರೀತಿಗೌರವಗಳು ಉಕ್ಕುತ್ತಿರಲಿಲ್ಲ; ಹೂವಿಗೂ ತನ್ನಂತೆ ಜೀವವುಂಟು ಅದರಲ್ಲೂ ಶಿವನಿದ್ದಾನೆ ಎಂಬುದು ಕವಿಯ ನಂಬಿಕೆ. ಆದ್ದರಿಂದಲೇ ಅವನು ಪ್ರತಿಯೊಂದು ಹೂ ಬಳ್ಳಿಯನ್ನೂ ಮಾತಾಡಿಸಿ ಬೇಡುವುದು ಸಸ್ಯಗಳಿಗೂ ಪ್ರಾಣವಿದೆಯೆನ್ನುವುದು ಇತ್ತೀಚಿನ ವೈಜ್ಞಾನಿಕ ಸಿದ್ಧಾಂತ, ಆದರೆ ಅದು ಕವಿ ಹೃದಯಕ್ಕೆ ಎಂದೂ ಅರಿವಾಗಿದ್ದ ಸತ್ಯ. ಎಂತಲೇ ಹಲಿಹರ ಹೂವಿಗೆ ನೋವಾಗದಂತೆ ನಡೆದುಕೊಳ್ಳುತಾನೆ; ಸಕಲ ಜೀವರಾಶಿಗೂ ಲೇಸನ್ನೆ ಬಯಸುವ ಮನೋಧರ್ಮವನ್ನು ತೋರುತ್ತಾನೆ; 'ಸತ್ವಭೂತಹಿತೇರತಃ' ಎಂಬ ಗೀತಾವಾಕ್ಯಕ್ಕೆ ವ್ಯಾಖ್ಯಾನವಾಗುತ್ತಾನೆ (ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತಾನೆ) ಈ ಪ್ರವೃತ್ತಿಯನ್ನು 'ಅಹಿಂಸೆ' ಎಂಬ ಒಂದು ಮಾತಿನಲ್ಲಿ, ಅದರ ವ್ಯಾಪಕಾರ್ಥದಲ್ಲಿ ಸಂಗ್ರಹಿಸಬಹುದು.

ಹರಿಹರನು ಹೂಕೊಯ್ಯುವುದು ತನ್ನ ಸ್ವಾರ್ಥಕ್ಕಲ್ಲ, ಶಿವನ ಆರಾಧನೆಗಾಗಿ, ಇದನ್ನವನು ಪದೇ ಪದೇ ನೆನಪು ಮಾಡುತ್ತಾನೆ; ಒಂದೊಂದು ಹೂಗಿಡದ ಹತ್ತಿರಹೋದಾಗಲೂ ಈಸಂಗತಿಯನ್ನು ತಿಳಿಸುತ್ತಾನೆ. ನನಗಲ್ಲ, ಶಿವನಿಗೆ ಎಂಬುದೇ ಅವನ ಪಲ್ಲವಿ, ಭಾವದಲ್ಲಿ ನಾವು ಮಾಡುವ ಕರ್ಮಗಳನ್ನೆಲ್ಲ ಶಿವನಿಗೆ ಸಮರ್ಪಿಸಬೇಕು, ನಾವು ನಿಮಿತ್ತ ಮಾತ್ರರಾಗಬೇಕು ಎನ್ನುವ ದೊಡ್ಡ ತತ್ತ್ವವನ್ನು ಕವಿ ಈಮೂಲಕ ಶ್ರುತಪಡಿಸಿದ್ದಾನೆ ಎನ್ನಬಹುದೆ?

ಹೂವುಗಳನ್ನು ಕೊಳ್ಳುವುದು ದೇವಲಿಗಾಗಿಯೇ ಆದರೂ, ಗಿಡದ ಅನುಮತಿಯಿಲ್ಲದೆ ಕೀಳುವುದು ಸೌಜನ್ಯವಲ್ಲ; ಹಾಗೆ ಮಾಡುವುದು ದೌಷ್ಟ, ಅಪರಾಧ. ಇದನ್ನು ಬಲ್ಲ ಕವಿ ಒಡೆಯನ ಒಪ್ಪಿಗೆ ಪಡೆದೇ ವಸ್ತುವನ್ನು ತೆಗೆದುಕೊಳ್ಳುವ ಉದಾತ್ತ ಸಂಸ್ಕೃತಿಯನ್ನು ತೋರ್ಪಡಿಸಿದ್ದಾನೆ. ಹಾಗೆ ಮಾಡಿದುದರಿಂದ ಅವನ ಕುಸುಮ ಸಂಗ್ರಹ ದಾನಸ್ವೀಕಾರವಾಯಿತೇ ವಿನಾ ಅಪಹಾರವಾಗಲಿಲ್ಲ.

ಹೀಗೆ 'ಪುಷ್ಪರಗಳೆ' ಒಳ್ಳೆಯ ಕವಿತೆಯೂ ಆಗಿದೆ, ಕಾಣ್ಕೆಯೂ ಆಗಿದೆ; ಸತ್ಯ ಶಿವ ಸೌಂದರ್ಯದ ಅಂಶಗಳು ಅದರಲ್ಲಿ ಮುಪ್ಪುರಿಗೊಂಡಿವೆ; ಸೌಂದರ್ಯಶಿವಕ್ಕೆ ಸಮರ್ಪಿತವಾಗಿದೆ. ಯೋಚಿಸಿದಷ್ಟೂ ಆಳವಾಗುವ ಅರ್ಥದ ಪದರಗಳನ್ನುಳ್ಳದ್ದು ಈ ಕೃತಿ. ಇದು ಕನ್ನಡ ವಾಗ್ದೇವಿಯ ಅನರ್ಘ್ಯರತ್ನಾಭರಣ ಅಲ್ಲದಿರಬಹುದು; ಆದರೆ ಅವಳ ಪೊಸ ಪೂಮಾಲೆಯಂತೂ ಅಹುದು ಅಷ್ಟುಸಾಕು. ಹೂಮುಡಿಯದೆ ಸುಮಂಗಲಿ ಶೋಭಿಸುವುದುಂಟೆ?

ಕೊನೆಯ ಟಿಪ್ಪಣಿಗಳು

ಇಂತಹ ಅನಾಘ್ರಾತ ಮೀಸಲು ಪುಷ್ಪ ಹರಿಹರನಿಗೆ ಬಹುಪ್ರಿಯವೆಂದು ಕಾಣುತ್ತದೆ; 'ಬಸವರಾಜ ದೇವರ ರಗಳೆಯಲ್ಲೂ (ಮೂರನೆಯ ಸ್ಥಲ) ಅಳಿಯೆರಗದನಿಲನಲುಗದ ರವಿಕರಂ ಪುಗದ' ಎಂಬುದು ಬರುತ್ತದೆ. ಆ ಭಾಗ 'ಪುಷ್ಪರಗಳೆ'ಯನ್ನೇ ಹೋಲುತ್ತದೆ.

ಇಲ್ಲಿ ಆ ಪತ್ರಗಳನ್ನು "ಪರಿಮಳದ ಭಾಜನ"ಗಳೆಂದು ಕರೆದಿದ್ದಾನೆ. ಈ ರೂಪಕ ಸೊಗಸಾಗಿದೆ ನಿಜ. ಆದರೆ ಕುಸುಮಗಳನ್ನೇ ಪರಿಮಳದ ಭಾಜನಗಳೆಂದು ವರ್ಣಿಸಿದ್ದಾರೆ. ಅದು ನಿಶ್ಚಯವಾಗಿಯೂ (ಣಡಿಠಞಜ ಠಜಿ ಜಿ ಠಜಣುಣ) ಆಗುತ್ತಿತ್ತು; ಈ ಕಲ್ಪನೆ ಹರಿಹರನಿಗೆ ಹೊಳೆಯಬಾರದಿತ್ತೆ ಎನಿಸುತ್ತದೆ.

ಕಡೆಯಲ್ಲಿ ಬರುವ ಈ "ಪರಿಕಿಸು ವಿರೂಪಾಕ್ಷ" ಎಂಬ ಮಾತು ವಿಶೇಷ ಗಮನಾರ್ಹವಾಗಿದೆ. ಕೃಪಾಯಾಚನೆಯನ್ನಷ್ಟೆ ಹರಿಹರ ಮಾಡಿಲ್ಲ ; ಬೇಕಾದರೆ ನನ್ನನ್ನು ಪರೀಕ್ಷಿಸು ಎಂದು ದೇವರಿಗೆ ಸವಾಲು ಹಾಕಿದ್ದಾನೆ. ಈ ನೈತಿಕ ಧೈರ್ಯ ಸಾಮಾನ್ಯರಿಗೆ ಅಳವಾನದ ಭಕ್ತರಿಗೆ ಸಾಧ್ಯವಲ್ಲ. ಮೊದಲು ಆತ್ಮ ಪರೀಕ್ಷೆ ಮಾಡಿಕೊಂಡು ಶುದ್ಧವಾಗಿ ಪರಿಣಮಿಸಿದ ಜೇತನ ಮಾತ್ರ ಕೆಚ್ಚಿನಿಂದ ಇಂತಹ ಮಾತುಗಳನ್ನಾಡಬಲ್ಲುದು. ಬಸವಣ್ಣನವರು ಅಂಥ ಒಂದು ಮಹಿಮಾನಿತ ಜೇತನ ಅವರ ವಚನಗಳು ಆತ್ಮ ಪರೀಕ್ಷೆಯ ಒಂದು ಪರಂಪರೆ. ನಾವು ಬಸವಣ್ಣ ಹರಿಹರ ಮುಂತಾದವರನ್ನು ಭಕ್ತರೆಂದು ತಲೆಯ ಮೇಲಿಟ್ಟುಕೊಂಡು ಕೊಂಡಾಡುತ್ತೇವೆ; ಅವರು ನಮ್ಮವರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಎಲ್ಲ ಸರಿ, ಆದರೆ ಆ ಮಹಾಪುರುಷರು ಕೈಕೊಂಡ ಆತ್ಮ ಪರೀಕ್ಷೆ ಯಲ್ಲಿ ಒಂದು ಅಂಶವನ್ನಾದರೂ ಕೈಕೊಳ್ಳುವವರು ಎಷ್ಟು ಜನ? ಆತ್ಮ ಪರೀಕ್ಷೆ ಮಾಡಿಕೊಂಡಾಗ ನಾವೂ ಉದ್ಧಾರವಾಗಬಹುದು ; "ಪರಿಕಿಸು ವಿರೂಪಾಕ್ಷ" ಎಂದು ಧೈರ್ಯದಿಂದ ಎದೆ ತೆರೆದು ನಿಲ್ಲಬಹುದು

ISARA INSTITUTE OF MANAGEMENT & PROFESSIONAL STUDIES

WWW.IIMPS.IN

EARN YOUR

MBA



Accreditation & Ranking

UGC / NCTE Approved.

INFO@IIMPS.IN

011-41005174

RESEARCH GATEWAY

STOP PLAGIARISM

1 Submit your content in Word File.

2 Get report in 48 hrs.

3 *Missing content or references will be fixed.

4 Citation for your work.

5 Get accurate user friendly report.

researchgateway.in | info@researchgateway.in

+91-9205579779

AROGYAM ONLINE

Arogyam Ayurveda

Holistic Healing through herbs

100% NATURAL

PARIVARTAN PSYCHOLOGY CENTER

COLOR PSYCHOLOGY : HOW COLOR AFFECT YOUR CHILD

BLUE — Calms your Child's Mind & Body

YELLOW — Promotes Concentration, Stimulates the Memory

PINK — Evokes Empathy, makes your Child Calm

RED — Excites and energizes your Child's body

GREEN — Improves Reading speed and Comprehension

www.parivartan4u.com

Confuse about your children's future?

भारतीय भाषा, शिक्षा, साहित्य एवं शोध

ISSN 2321 – 9726

WWW.BHARTIYASHODH.COM

INTERNATIONAL RESEARCH JOURNAL OF MANAGEMENT SCIENCE & TECHNOLOGY

ISSN – 2250 – 1959 (0) 2348 – 9367 (P)

WWW.IRJMST.COM

INTERNATIONAL RESEARCH JOURNAL OF COMMERCE, ARTS AND SCIENCE

ISSN 2319 – 9202

WWW.CASIRJ.COM

INTERNATIONAL RESEARCH JOURNAL OF MANAGEMENT SOCIOLOGY & HUMANITIES

ISSN 2277 – 9809 (0) 2348 - 9359 (P)

WWW.IRJMSH.COM

INTERNATIONAL RESEARCH JOURNAL OF SCIENCE ENGINEERING AND TECHNOLOGY

ISSN 2454-3195 (online)

WWW.RJSET.COM

INTEGRATED RESEARCH JOURNAL OF MANAGEMENT, SCIENCE AND INNOVATION

ISSN 2582-5445

WWW.IRJMSI.COM

JOURNAL OF LEGAL STUDIES,POLITICS AND ECONOMICS RESEARCH

WWW.JLPER.COM